ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ, ಸಂಡೂರು
**PC NO. 76/ 2019**

ಪಿಡಬ್ಲ್ಯು ಃ 1

| | | | |
|---|---|---|---|
| ಸಾಕ್ಷಿಯ ಹೆಸರು | : | ತಿಪ್ಪಯ್ಯ | ದಿನಾಂಕ 10-08-2021 |
| ತಂದೆಯ/ಗಂಡನ ಹೆಸರು | : | ಹೊನ್ನೂರಪ್ಪ | ರಂದು ಪ್ರಮಾಣ |
| ವಯಸ್ಸು | : | 55 ವರ್ಷ | ವಚನ |
| ಉದ್ಯೋಗ | : | ವ್ಯವಸಾಯ | ಮಾಡಿಸಲಾಯಿತು |
| ವಾಸಸ್ಥಳ | : | ಮಾಳಪುರ | |

ದಿನಾಂಕ **10-08-2021** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು
ಪಿರ್ಯಾದಿದಾರರ ಪ್ರಮಾಣಿಕೃತ ಹೇಳಿಕೆ ಶ್ರೀ ಎ ವಿ ಕೆ ವಕೀಲರಿಂದ.

ನಾನು ಈ ಫಿರ್ಯಾದಿಯನ್ನು ಮಾಳಪುರದ ಮಾರಪ್ಪನವರ ವಿರುದ್ಧ ಸಲ್ಲಿಸಿರುತ್ತೇನೆ.

ನಾನು ಮಾಳಪುರದ ನಿವಾಸಿಯಾಗಿದ್ದು ನನಗೆ ಮಾಳಪುರದಲ್ಲಿ ಸರ್ವೆ.ನಂಬರ್ ೪೧/ಎಫ್ ವಿಸ್ತೀರ್ಣ ೮-೦೫ ಎಕರೆ ಜಮೀನು ಇರುತ್ತದೆ. ಸದರಿ ಸ್ವತ್ತು ಮೂಲತ ನಮ್ಮ ತಾತನವರ ಸ್ವತ್ತಗಿರುತ್ತದೆ. ಮೇಲ್ಕಂಡ ಸ್ವತ್ತಿನ ಪಹಣಿಯು ಹೊನ್ನೂರಮ್ಮ ಮತ್ತು ಗೌರಮ್ಮನವರ ಹೆಸರನಲ್ಲಿ ಇದ್ದು ಸದರಿಯವರು ಪೆಡ್ಡಹನುಮರವರ ಮಕ್ಕಳಾಗಿರುತ್ತಾರೆ.

ಹೊನ್ನೂರಮ್ಮನವರು ನನ್ನ ತಾಯಿಯಾಗಿದ್ದು ಗೌರಮ್ಮನವರು ನನ್ನ ಚಿಕ್ಕಮ್ಮನವರುಗಿರುತ್ತಾರೆ. ನಾನು ಹೊನ್ನೂರಮ್ಮನವರ ಮಗನಾಗಿರುತ್ತೇನೆ. ನನ್ನ ಚಿಕ್ಕಮ್ಮ ಗೌರಮ್ಮನವರಿಗೆ ರಮ್ಮಕ್ಕ ಮತ್ತು ಸಂಡೂರಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ರು. ನನ್ನ ತಾಯಿ ಹೊನ್ನೂಮ್ಮ ಮತ್ತು ನನ್ನ ಚಿಕ್ಕಮ್ಮ ಗೌರಮ್ಮನವರ ಮರಣ ನಂತರ ಮೇಲ್ಕಂಡ ಸ್ವತ್ತಿನ ಖಾತೆಯು ನನ್ನ ಮತ್ತು ರಾಮಕ್ಕ ಮತ್ತು ಸಂಡೂರಮ್ಮನವರ ಹೆಸರಿಗೆ ಖಾತೆ ಬದಲಾವಣೆ ಆಗಿದ್ದು. ನಾವುಗಳೇ ಮೇಲ್ಕಂಡ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತೇವೆ. ಮೇಲ್ಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಮಾರಕ್ಕನವರಿಗೆ ಯಾವುದೇ ಹಕ್ಕು ಇಲ್ಲದೇ ಇದ್ರು ಸಹ ನಮ್ಮಗೆ ಮೋಸ ಮಾಡಿ ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ. ನಾನಾಗಲಿ ರಾಮಕ್ಕ ಸಂಡೂರಮ್ಮನವರಾಗಲಿ ಮೇಲ್ಕಂಡ ಸ್ವತ್ತನ್ನು ಮಾರಕ್ಕನವರಿಗೆ ಮಾರಾಟ ಮಾಡಿರುವುದಿಲ್ಲ. ಮಾರಕ್ಕನವರು ನನಗೆ ಮತ್ತು ರಾಮಕ್ಕ ಮತ್ತು ಸಂಡೂರಮ್ಮನವರಿಗೆ ಮೋಸ ಮಾಡಿ ತನ್ನ ಹೆಸರಿಗೆ ಖಾತೆ ಬದಲಾಣೆ ಮಾಡಿಸಿಕೊಂಡಿದ್ದರಿಂದ ಮಾರಕ್ಕನವರಿಗೆ ಲಾಭವಾಗಿದ್ದು ನನಗೆ ಮತ್ತು ನನ್ನ ಸಹೋದರಿಯಾಗಿಗೆ ನಷ್ಟ ಅಗಿರುತ್ತದೆ. ಮಾರಕ್ಕ ನಮಗೆ ಮೋಸ ಮಾಡಿ ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡ ವಿಷಯ ನಮಗೆ ೨

ವರ್ಷದ ಹಿಂದೆ ತಿಳಿಯಿತು. ಮಾರಕ್ಕನವರು ನಮಗೆ ಮೋಸ ಮಾಡಿದ ವಿಷಯ ತಿಳಿದ ನಂತರ ವಕೀಲರ ಮೂಲಕ ಮಾರಕ್ಕನವರಿಗೆ ನೋಟಿಸ್ ನೀಡಿದ್ದು ಮತ್ತು ಪೊಲೀಸ್ ಸ್ಟೇಷನಲ್ಲಿ ಮಾರಕ್ಕನವರ ವಿರುದ್ಧ ಕಂಪ್ಲೇಟ್ ಕೊಟ್ಟಿದ್ದೇನು ಅದರೂ ಸಹ ಪೊಲೀಸರು ಮಾರಕ್ಕನವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಇದರಿಂದಾಗಿ ಮಾರಕ್ಕನವರ ವಿರುದ್ಧ ನಾನು ಈ ಮಾನ್ಯ ನ್ಯಾಯಾಲಯದಲ್ಲಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಇದ್ದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸರ್ವೆ ನಂಬರ್ **41**/ಎಫ್ ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ **1** ರಿಂದ **3** ಎಂದು, ತಪಾಸಣೆ ಪ್ರತಿಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **4** ಎಂದು, ಮುಟೇಷನ್ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ಟ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ **5** ಮತ್ತು **6** ಎಂದು ಗುರುತಿಸಲಾಯಿತು. ಆದ್ದುದರಿಂದ ನಾನು ಫಿರ್ಯಾದಿಯಲ್ಲಿ ಕೋರಿರುವಂತೆ ಆರೋಪಿತರ ವಿರುದ್ಧ ಸೂಕ್ತ ಆದೇಶವನ್ನು ಮಾಡಬೇಕಾಗಿ ಪ್ರಾರ್ಥಿಸುತ್ತೆನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾದಂ., ಸಂಡೂರು.